# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 2254 |
| **ಸದಸ್ಯರ ಹೆಸರು** | ಡಾ ವೈ.ಎ ನಾರಾಯಣಸ್ವಾಮಿ<br>(ಶಿಕ್ಷಕರ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | 21.03.2022 |
| **ಉತ್ತರಿಸಬೇಕಾದ ಸಚಿವರು** | ಮಾನ್ಯ ಉನ್ನತ ಶಿಕ್ಷಣ, ಐಟಿ ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |
| **ಪ್ರಶ್ನೆ** | **ಉತ್ತರ** |
| ಅ) ಸ್ಟಾರ್ಟ್ ಅಪ್ ಕಾರ್ಯಕ್ರಮದ ಉದ್ದೇಶವೇನು? | ಕರ್ನಾಟಕದಲ್ಲಿ ಸ್ಟಾರ್ಟ್ ಅಪ್ ಕಾರ್ಯಕ್ರಮದ ಉದ್ದೇಶವು ಈ ಕೆಳಕಂಡಂತಿರುತ್ತದೆ:-<br>• ಕರ್ನಾಟಕದಲ್ಲಿ ಉತ್ಪನ್ನ ಸ್ಟಾರ್ಟ್‌ಅಪ್‌ಗಳನ್ನು ಒಳಗೊಂಡಂತೆ ತಂತ್ರಜ್ಞಾನ ಆಧಾರಿತ ಸ್ಟಾರ್ಟ್ ಅಪ್‌ಗಳ ಬೆಳವಣಿಗೆ ಉತ್ತೇಜಿಸುವುದು.<br>• ಸ್ಟಾರ್ಟ್‌ಅಪ್ ವಲಯದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಜಿಸಲು ಕ್ರಮ ವಹಿಸುವುದು.<br>• ಆರೋಗ್ಯ ಪಾಲನೆ, ಆಹಾರ ಭದ್ರತೆ, ಶುದ್ಧ ಪರಿಸರ ಹಾಗೂ ಎಲ್ಲರಿಗೂ ಶಿಕ್ಷಣ ಇತ್ಯಾದಿ ವಲಯಗಳಲ್ಲಿ ಸಾಮಾಜಿಕ ಪರಿಣಾಮವಿರುವ ನಾವೀನ್ಯತಾ ತಂತ್ರಜ್ಞಾನ ಪರಿಹಾರಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವುದು.<br>• ಸ್ಟಾರ್ಟ್‌ಅಪ್‌ಗಳಲ್ಲಿರುವ ನ್ಯೂನ್ಯತೆಗಳನ್ನು ಗುರುತಿಸಿ, ಅಗತ್ಯವಾದ ಮಾರ್ಗದರ್ಶನ, ಜ್ಞಾನ ಮತ್ತು ಸಂಪರ್ಕ ಜಾಲವನ್ನು ಸ್ಪಷ್ಟ ರೂಪುರೇಷೆಯೊಂದಿಗೆ ಒದಗಿಸುವ ಮೂಲಕ ಅಂತಹ ಸ್ಟಾರ್ಟ್ ಅಪ್‌ಗಳಿಗೆ ವಾಣಿಜ್ಯೋದ್ಯಮದ ಪೂರ್ವ ಯಾತ್ರೆಯಲ್ಲೇ ಒತ್ತು ನೀಡುವುದು.<br>• ಸ್ಟಾರ್ಟ್ ಅಪ್ ಕಾರ್ಯಕ್ರಮದಲ್ಲಿ ಮುಖಾಮುಖಿ ಮಾರ್ಗದರ್ಶನ ಗೋಷ್ಠಿಗಳು, ಕಮ್ಮಟಗಳು, ತರಬೇತಿ ಕಾರ್ಯಕ್ರಮಗಳು, ವಿಚಾರ ಸಂಕೀರ್ಣಗಳು, ಸಂಪರ್ಕ ಜಾಲ ಸಮಾವೇಶಗಳು, ಅಂತರಾಷ್ಟ್ರೀಯ ಪಾಲುದಾರಿಕೆ ಸಭೆಗಳು ಮತ್ತು ಬೂಟ್ ಕ್ಯಾಂಪ್‌ಗಳು ಹಾಗೂ ಹೂಡಿಕೆದಾರರ ಸಮಾವೇಶಗಳನ್ನು ಆಯೋಜಿಸುವುದು , ಹೊರ ವಲಯಗಳಲ್ಲಿ ಮೂಲ ಸೌಕರ್ಯ ಒದಗಿಸುವಿಕೆ, ಇತ್ಯಾದಿ ಅನುಕೂಲ ಕಲ್ಪಿಸುವುದು.<br>• ಸ್ಟಾರ್ಟ್‌ಅಪ್‌ನ ಅಗತ್ಯತೆಗನುಗುಣವಾಗಿ ಸಲಹೆಗಾರರನ್ನು ಗುರುತಿಸಿ ಸದರಿ ಸಲಹೆಗಾರರು ಹಾಗೂ ಸ್ಟಾರ್ಟ್ ಅಪ್‌ಗಳೊಂದಿಗೆ ಪರಿಚಯ ಮತ್ತು ಚರ್ಚೆ ಏರ್ಪಡಿಸುವುದು. |

| | |
|---|---|
| ಆ) ಕಳೆದ ಮೂರು ವರ್ಷಗಳಲ್ಲಿ ಈ ಕಾರ್ಯಕ್ರಮದ ಅಡಿಯಲ್ಲಿ ವ್ಯಾಪಾರಿಗಳು ಮತ್ತು ಉದ್ಯಮಿಗಳಿಗೆ ಧನ ಸಹಾಯ ಮತ್ತು ಪ್ರೋತ್ಸಾಹವನ್ನು ಒದಗಿಸಲಾಗಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು) | ಹೌದು.<br>ಕಳೆದ ಮೂರು ವರ್ಷಗಳಲ್ಲಿ ಈ ಕಾರ್ಯಕ್ರಮದ ಅಡಿಯಲ್ಲಿ ನವೋದ್ಯಮಿಗಳಿಗೆ ಧನ ಸಹಾಯ ಮತ್ತು ಪ್ರೋತ್ಸಾಹವನ್ನು ಒದಗಿಸಲಾಗಿರುತ್ತದೆ. ಅವುಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿರಿಸಿದೆ. |
| ಇ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಸೃಷ್ಟಿಯಾದ ಉದ್ಯೋಗಾವಕಾಶಗಳ ಪ್ರಮಾಣ ಎಷ್ಟು? | ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ಧನಸಹಾಯ ಒದಗಿಸಿದ ಸ್ಟಾರ್ಟ್ ಅಪ್‌ಗಳಲ್ಲಿ ಸುಮಾರು 1,400 ಖಾಯಂ ಉದ್ಯೋಗಿಗಳು ಹಾಗೂ 700 ಅರೆಕಾಲಿಕ ಉದ್ಯೋಗಿಗಳು ಸೇರಿ, ಒಟ್ಟಾರೆಯಾಗಿ ಈ ವಲಯದಲ್ಲಿ ಅಂದಾಜು 2,100 ಉದ್ಯೋಗಾವಕಾಶಗಳು ಸೃಷ್ಟಿಯಾಗಿರುತ್ತವೆ. |

ಐಟಿಬಿಟಿ 48 ಎಲ್ ಸಿಎಂ 2022

**(ಡಾ॥ ಸಿ. ಎನ್. ಅಶ್ವಥ್ ನಾರಾಯಣ)**
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.

# ಅನುಬಂಧ

## ಕಳೆದ ಮೂರು ವರ್ಷಗಳಲ್ಲಿ ಸ್ಟಾರ್ಟ್ ಅಪ್ ಕಾರ್ಯಕ್ರಮದಡಿಯಲ್ಲಿ ನವೋದ್ಯಮಿಗಳಿಗೆ ಒದಗಿಸಿದ ಧನಸಹಾಯದ ಜಿಲ್ಲಾವಾರು ಮಾಹಿತಿ

| ಕ್ರ. ಸಂ | ಜಿಲ್ಲೆ | ಸ್ಟಾರ್ಟ್ ಅಪ್ ಸಂಖ್ಯೆ | ನಿಗದಿಪಡಿಸಿದ ಅನುದಾನ ರೂ.ಲಕ್ಷಗಳಲ್ಲಿ | ಇಂದಿನವರೆಗೆ ಬಿಡುಗಡೆಯಾದ ಅನುದಾನ ರೂ.ಲಕ್ಷಗಳಲ್ಲಿ |
|---|---|---|---|---|
| 1 | ಬಾಗಲಕೋಟೆ | 1 | 10 | 10 |
| 2 | ಬೆಳಗಾವಿ | 5 | 110 | 55 |
| 3 | ಬಳ್ಳಾರಿ | 3 | 50 | 31.5 |
| 4 | ಬೆಂಗಳೂರು | 267 | 6381 | 4900.07 |
| 5 | ಬೆಂಗಳೂರು ಗ್ರಾಮಾಂತರ | 12 | 310 | 279 |
| 6 | ಬೀದರ್ | 6 | 110 | 79 |
| 7 | ಬಿಜಾಪುರ | 3 | 50 | 50 |
| 8 | ಚಿಕ್ಕಬಳ್ಳಾಪುರ | 2 | 30 | 21.5 |
| 9 | ಚಿಕ್ಕ ಮಗಳೂರು | 1 | 30 | 15 |
| 10 | ದಕ್ಷಿಣ ಕನ್ನಡ | 11 | 290 | 202.5 |
| 11 | ದಾವಣಗೆರೆ | 2 | 55 | 46.5 |
| 12 | ಧಾರವಾಡ | 30 | 706 | 510.5 |
| 13 | ಹಾವೇರಿ | 1 | 15 | 7.5 |
| 14 | ಹುಬ್ಬಳ್ಳಿ | 5 | 126 | 115 |
| 15 | ಕಲ್ಬುರ್ಗಿ | 10 | 126 | 95 |
| 16 | ಕಾರವಾರ | 1 | 15 | 15 |
| 17 | ಮಂಡ್ಯ | 2 | 60 | 46.5 |
| 18 | ಮೈಸೂರು | 12 | 231 | 166.5 |
| 19 | ರಾಯಚೂರು | 3 | 50 | 30 |
| 20 | ರಾಮನಗರ | 2 | 60 | 44 |
| 21 | ತುಮಕೂರು | 8 | 155 | 107 |
| 22 | ಉಡುಪಿ | 7 | 182 | 156.5 |
| 23 | ಉತ್ತರ ಕನ್ನಡ | 5 | 120 | 74 |
| | **ಒಟ್ಟು** | **399** | **9,272** | **7,057.57** |